# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ

ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
ವಿಜ್ಞಾನ ಭವನ' ನಂ: 24/2, 3ನೇ ಮಹಡಿ, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560070
ದೂರವಾಣಿ-080-2671116 ಇ-ಮೇಲ್: ksteps.dst@gmail.com


ಸಂಖ್ಯೆ: ಕೆಸ್ಟೆಪ್ಸ್/ ವಿತಂದಾಸ /CISEE/GRD No. 1011/2021-22/ 426 C          ದಿನಾಂಕ: 15ನೇ ಫೆಬ್ರುವರಿ, 2023

ಇವರಿಗೆ:
ಡಾ. ಯು. ಪಿ. ಕುಲಕರ್ಣಿ
ಪ್ರಾಧ್ಯಾಪಕರು
ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ವಿಭಾಗ
ಎನ್‌ಬಿಎ ಸಂಯೋಜಕರು
ಎಸ್‌ಡಿಎಂ ಕಾಲೇಜ್ ಆಫ್ ಇಂಜಿನಿಯರಿಂಗ್ & ಟೆಕ್ನಾಲಜಿ
ಧವಳಗಿರಿ, ಧಾರವಾಡ-580 002

ಮಾನ್ಯರೇ,

ವಿಷಯ: 2021-22ನೇ ಸಾಲಿನ ವಿತಂದಾಸ ಯೋಜನೆಗಳಡಿ ಪ್ರಸ್ತಾವನೆ ಆಯ್ಕೆಯಾಗಿರುವ ಬಗ್ಗೆ
ಉಲ್ಲೇಖ: 1. ವಿತಂದಾಸ ಅರ್ಜಿ ಆಹ್ವಾನ ಜಾಹೀರಾತು ಸಂಖ್ಯೆ: DST/KSTePS/VGST/2021-22 ದಿನಾಂಕ: 24.01.2022
2. ಸರ್ಕಾರಿ ಆದೇಶ ಸಂಖ್ಯೆ: ಐಟಿ ಬಿಟಿ 19 ಎಸ್ ಟಿ ಎಸ್ 2023, ಬೆಂಗಳೂರು, ದಿನಾಂಕ: 14.02.2023

***

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಭಾರತ ರತ್ನ ಪ್ರೊ|| ಸಿ.ಎನ್.ಆರ್. ರಾವ್, ಎಫ್.ಆರ್.ಎಸ್., ರವರ ಅಧ್ಯಕ್ಷತೆಯಡಿ ರಚಿಸಲಾಗಿರುವ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ (ವಿತಂದಾಸ) ಶಿಫಾರಸ್ಸಿನ ಆಧಾರದ ಮೇಲೆ 2021-22ನೇ ಸಾಲಿನ ವಿತಂದಾಸದ ವಿಜ್ಞಾನ ಮತ್ತು ಇಂಜಿನಿಯರಿಂಗ್ ಶಿಕ್ಷಣದ ಸೃಜನಶೀಲ ಕೇಂದ್ರಗಳ ಸ್ಥಾಪನೆ (CISEE) ಯೋಜನೆಯಡಿ ತಾವು ಸಲ್ಲಿಸಿದ್ದ **"Impact of neuro signals on human health and emotions"** ಶೀರ್ಷಿಕೆಯ ಪ್ರಸ್ತಾವನೆಯು ಆಯ್ಕೆಗೊಂಡು ಸರ್ಕಾರದಿಂದ ಅನುಮೋದನೆಗೊಂಡಿರುತ್ತದೆ ಎಂದು ತಿಳಿಸಲು ಹರ್ಷಿಸುತ್ತೇನೆ.

ವಿವಿಧ ಯೋಜನೆಗಳಡಿ ಆಯ್ಕೆಯಾದ ಸಂಸ್ಥೆ/ಪ್ರಸ್ತಾವನೆಗೆ ಸರ್ಕಾರದಿಂದ ಒದಗಿಸಲಾಗುವ ಅನುದಾನದ ವಿವರವನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ.

ಈ ನಿಟ್ಟಿನಲ್ಲಿ, ಈ ಕೆಳಕಂಡ ದಾಖಲೆಗಳನ್ನು ವಿತಂದಾಸ ಕಛೇರಿಗೆ (ನಂ: 702, 7ನೇ ಮಹಡಿ, 4ನೇ ಹಂತ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವೀದಿ, ಬೆಂಗಳೂರು-560001) ಸಲ್ಲಿಸಲು ಸೂಚಿಸಿದೆ:

1) PPMS ನಲ್ಲಿ ಅರ್ಜಿಯೊಂದಿಗೆ ಸಲ್ಲಿಸಲಾಗಿರುವ ಸಂಬಂಧಪಟ್ಟ ಪ್ರಾಧಿಕಾರದ ಸಹಿಯಿರುವ ಕೆಳಕಂಡ ದಾಖಲೆಗಳು:
   - ಪ್ರಸ್ತಾವನೆ ಯ ಮೂಲ ಪ್ರತಿ – **2 ಪ್ರತಿಗಳು**
   - Part-A ದಾಖಲೆಯ ಮೂಲ ಪ್ರತಿ (**ಅನುಬಂಧ-1** ರಲ್ಲಿ ನೀಡಲಾಗಿರುವ ಅನುದಾನದ ವಿವರಕ್ಕೆ ಹೊಂದುವಂತೆ ಇರತಕ್ಕದ್ದು)
   - Undertaking letter ಮತ್ತು ಸಂಸ್ಥೆಯಿಂದ ನೀಡಲಾಗಿರುವ Endorsement Letter ನ ಮೂಲ ಪ್ರತಿಗಳು
   - ಸಹಯೋಗದ ಪತ್ರ (Letter of Collaboration) - ಪ್ರಸ್ತಾವನೆಯಲ್ಲಿ ನಮೂದಿಸಿದ್ದಲ್ಲಿ
   - ಸಂಶೋಧನಾ ಲೇಖನಗಳ (Publications) ಪ್ರತಿ, CV, ಅನುಭವ ಪ್ರಮಾಣ ಪತ್ರ, ಪಿ.ಹೆಚ್.ಡಿ. ಪ್ರಮಾಣ ಪತ್ರ ಮತ್ತು ಇತರೆ ಸಂಬಂಧಪಟ್ಟ ದಾಖಲೆಗಳು

2) ಅಫಿಡವಿಟ್ (**ಅನುಬಂಧ-2** ರಲ್ಲಿ ನೀಡಲಾಗಿರುವ ನಮೂನೆಯಲ್ಲಿ ರೂ. 100/- ರ ಛಾಪಾ ಕಾಗದದ ಮೇಲೆ ನೀಡತಕ್ಕದ್ದು).

3) ಸಂಸ್ಥೆಯ ಮುಖ್ಯಸ್ಥರ ಲೆಟರ್ ಹೆಡ್ ನಲ್ಲಿ ಅನುದಾನ ಬಿಡುಗಡೆಗೆ ಸಂಸ್ಥೆಯ ಬ್ಯಾಂಕ್ ಖಾತೆಯ ಕೆಳಕಂಡ ವಿವರ (ಸಂಸ್ಥೆಯ ಮುಖ್ಯಸ್ಥರ ಖಾತೆಯ ವಿವರವನ್ನು ಮಾತ್ರ ನೀಡತಕ್ಕದ್ದು):

ಖಾತೆಯ ಹೆಸರು:
ಖಾತೆಯ ಸಂಖ್ಯೆ:
ಬ್ಯಾಂಕ್ ನ ಹೆಸರು ಮತ್ತು ಶಾಖೆ:
IFSC ಸಂಖ್ಯೆ:

ಮುಂದುವರಿದು, ತಮ್ಮ ಯೋಜನೆಯ **ಜಿ. ಆರ್. ಡಿ. ಸಂಖ್ಯೆ 1011** ಆಗಿದ್ದು, ವಿತಂದಾಸ/ಕೆಸ್ಟೆಪ್ಸ್ ಜೊತೆ ನಡೆಸಲಾಗಿರುವ ಮುಂದಿನ ಎಲ್ಲಾ ಪತ್ರ ವ್ಯವಹಾರಗಳಿಗೆ ಈ ಸಂಖ್ಯೆಯನ್ನು ತಪ್ಪದೇ ನಮೂದಿಸಲು ಸೂಚಿಸಿದೆ.

**ಈ ಎಲ್ಲಾ ದಾಖಲೆಗಳನ್ನು ದಿನಾಂಕ: 22ನೇ ಫೆಬ್ರವರಿ, 2023 ರೊಳಗಾಗಿ ವಿತಂದಾಸ ಕಛೇರಿಗೆ ಸಲ್ಲಿಸಲು ಕೋರಿದೆ.** ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080-2203-2013/ ಇಮೇಲ್: visiongroup.st@gmail.com ಅನ್ನು ಸಂಪರ್ಕಿಸಬಹುದಾಗಿದೆ.

ಧನ್ಯವಾದಗಳೊಂದಿಗೆ,

ನಿರ್ದೇಶಕರು (ತಾಂತ್ರಿಕ)
ವಿದ್ಯುನ್ಮಾನ, ಮಾತಂ, ಜೈತಂ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ/
ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್

**ಪ್ರತಿ:**

1) ಪ್ರಾಂಶುಪಾಲರು, ಎಸ್‌ಡಿಎಂ ಇಂಜಿನಿಯರಿಂಗ್ & ಟೆಕ್ನಾಲಜಿ ಕಾಲೇಜು, ಧವಳಗಿರಿ, ಧಾರವಾಡ - 580 002.
2) ಡಾ. ವಿದ್ಯಾಗೌರಿ ಕುಲಕರ್ಣಿ, ಸಹಾಯಕ ಪ್ರಾಧ್ಯಾಪಕರು (Co-PI), ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗ, ಎಸ್‌ಡಿಎಂ ಇಂಜಿನಿಯರಿಂಗ್ & ಟೆಕ್ನಾಲಜಿ ಕಾಲೇಜು, ಧವಳಗಿರಿ, ಧಾರವಾಡ - 580 002.
3) ಸರ್ಕಾರದ ಜಂಟಿ ಕಾರ್ಯದರ್ಶಿಗಳು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕೊಠಡಿ ಸಂಖ್ಯೆ: 305, 5ನೇ ಮಹಡಿ, 5ನೇ ಹಂತ, ಬಹುಮಹಡಿ ಕಟ್ಟಡ, ಡಾ|| ಅಂಬೇಡ್ಕರ್ ವೀದಿ, ಬೆಂಗಳೂರು – 560 001.
4) ಕಛೇರಿ ಪ್ರತಿ.